# ಬಾಪ್ತಿಸ್ಮದ ಒಂದು ಪುನರಾವಲೋಕನ

ಯೋಹಾನನು ಪಾಪಗಳ ಕ್ಷಮಾಪಣೆಗಾಗಿ (ಮಾರ್ಕ 1:4; ಲೂಕ 3:3) ಮಾನಸಾಂತರದ ಬಾಪ್ತಿಸ್ಮವನ್ನು ಪ್ರಸಂಗಿಸಿದನು (ಮತ್ತಾಯ 3:2). ಅವನಿಂದ ಪರಿವರ್ತನೆ ಹೊಂದಿದವರು ನಂಬಿದರೋ ಇಲ್ಲವೇ ಮಾನಸಾಂತರ ಪಟ್ಟರೋ, ಎಂಬುದನ್ನು ಸುವಾರ್ತೆಗಳು ವರದಿ ಮಾಡದಿದ್ದರೂ ಅವರು ಬಾಪ್ತಿಸ್ಮ ಹೊಂದಿದರೆಂದು ವರದಿ ಮಾಡುತ್ತವೆ (ಮತ್ತಾಯ 3:6; ಮಾರ್ಕ 1:5; ಲೂಕ 3:21; ಯೋಹಾನ 3:23; 4:1). ಅವರು ಬಾಪ್ತಿಸ್ಮ ಹೊಂದಿದರೆಂಬ ಸಂಗತಿಯಿಂದ, ಅವರು ಅವನ ಸಂದೇಶವನ್ನು ನಂಬಿದರು ಮತ್ತು ಮಾನಸಾಂತರ ಪಟ್ಟರು ಎಂದು ನಿರ್ಣಯಿಸ ಬೇಕಾಗುತ್ತದೆ. ಯೋಹಾನನು ಜನರಿಗೆ ಅವರ ಪಾಪಗಳನ್ನು ಅರಿಕೆ ಮಾಡಲಿಕ್ಕೆ ಹೇಳಿದನು ಎಂಬುದು ಎಲ್ಲಿಯೂ ಹೇಳಲ್ಪಡದಿದ್ದರೂ ಅವರು ಅರಿಕೆ ಮಾಡಿದರು (ಮತ್ತಾಯ 3:6).

ಯೋಹಾನನು ಬೋಧಿಸಿದ ಬಾಪ್ತಿಸ್ಮಕ್ಕೆ ಯೇಸುವು ಒಪ್ಪಿಸಿಕೊಟ್ಟನು (ಮತ್ತಾಯ 3:13-17). ಬಾಪ್ತಿಸ್ಮದ ಮುಖಾಂತರ ಯೇಸುವಿನ ಪರಿಚಯವಾಯಿತೆಂದು ಯೋಹಾನನು ಸಾಕ್ಷಿಕೊಟ್ಟನು (ಯೋಹಾನ 1:31). ಅಪೊಸ್ತಲ ಯೋಹಾನನು ಬಹುಶಃ ಈ ಹೇಳಿಕೆಗಳಲ್ಲಿ ಯೇಸುವಿನ ಬಾಪ್ತಿಸ್ಮಕ್ಕೆ ಸಂಬಂಧಿಸಿ ಹೇಳುತ್ತಿದ್ದನು: "ಈತನು, ಅಂದರೆ ಯೇಸುಕ್ರಿಸ್ತನು, ನೀರಿನಿಂದಲೂ ರಕ್ತದಿಂದಲೂ ಸಾಕ್ಷಿ ಹೊಂದಿದವನು. ನೀರಿನಿಂದ ಮಾತ್ರವಲ್ಲ ನೀರಿನಿಂದಲೂ, ರಕ್ತದಿಂದಲೂ, ಸಾಕ್ಷಿ ಹೊಂದಿದವನಾಗಿದ್ದಾನೆ"; "ಆತ್ಮ ನೀರು ರಕ್ತ ಎಂಬ ಮೂರು ಸಾಕ್ಷಿಗಳುಂಟು: ಈ ಮೂರು ಒಂದೇ ಅಭಿಪ್ರಾಯವಾಗಿ ಸಾಕ್ಷಿ ಹೇಳುತ್ತವೆ" (1 ಯೋಹಾನ 5:6, 7, 8ಎ).

ಯೋಹಾನನಿಗಿಂತ ಹೆಚ್ಚು ಜನರನ್ನು ಯೇಸುವು ಬಾಪ್ತಿಸ್ಮಕ್ಕೆ ತಂದಿರಬಹುದು (ಯೋಹಾನ 3:22, 26; 4:1). ಈ ಜನರು ಬಾಪ್ತಿಸ್ಮ ಹೊಂದಿದರು ಎಂದು ಸುವಾರ್ತೆಗಳು ಹೇಳುತ್ತವೆ, ಆದರೆ ಅವರು ನಂಬಿದರು, ಮಾನಸಾಂತರಪಟ್ಟರು ಇಲ್ಲವೇ ಅರಿಕೆ ಮಾಡಿದರು ಎಂಬ ದಾಖಲೆಗಳನ್ನು ನಾವು ಕಂಡುಕೊಳ್ಳುವದಿಲ್ಲ. ಈ ಸಂಗತಿಗಳು ಸ್ಪಷ್ಟವಾಗಿ ಹೇಳಲ್ಪಡದೇ ಇದ್ದುದರಿಂದ ಅವರು ಈ ಸಂಗತಿಗಳಲ್ಲಿ ಯಾವುದನ್ನೂ ಮಾಡಲಿಲ್ಲ ಎಂದು ನಿರ್ಧರಿಸಬಹುದೋ? ಅದು ನಮೂದಿಸಲ್ಪಟ್ಟಾಗ ಮತ್ತು ಇತರವುಗಳು ನಮೂದಿಸಲ್ಪಡದೇ ಇರುವಾಗ, ಬಾಪ್ತಿಸ್ಮದ ಮಹತ್ವವನ್ನು ನಾವು ಹೇಗೆ ಕಡಿಮೆ ಮಾಡಬಹುದು?

ಅಪೊಸ್ತಲರು ಬಾಪ್ತಿಸ್ಮ ಮಾಡಿಸಿಕೊಂಡರು ಎಂದು ನಾವು ಭರವಸೆಯಿಂದ ಒಪ್ಪಿಕೊಳ್ಳಲಾರೆವು, ಆದರೆ ಅವರು ಬಾಪ್ತಿಸ್ಮ ಹೊಂದಿದ್ದರೆಂದು ಅರ್ಥವಾಗುತ್ತದೆ. ಯೋಹಾನನು ಮತ್ತು ಯೇಸುವಿನ ಶಿಷ್ಯರಾದವರು ಬಾಪ್ತಿಸ್ಮ ಮಾಡಿಸಿಕೊಂಡರು (ಯೋಹಾನ 4:1). ಯೇಸುವು ತನ್ನ ಶಿಷ್ಯರ ಮಧ್ಯೆದೊಳಗಿಂದ, ತನ್ನ ಅಪೊಸ್ತಲರ ಮಧ್ಯದೊಳಗಿಂದ ಆರಿಸಿಕೊಂಡನು (ಲೂಕ 6:13), ಇದು ತನ್ನ ಶಿಷ್ಯರಾಗಲು ಬಾಪ್ತಿಸ್ಮ ಹೊಂದಿದ ಜನರನ್ನು ಆತನು ಆಯ್ಕೆ ಮಾಡಿಕೊಂಡನು ಎಂಬುದನ್ನು ಸೂಚಿಸುತ್ತದೆ.

## ಅಪೊಸ್ತಲರ ಕೃತ್ಯಗಳಲ್ಲಿ ಬಾಪ್ತಿಸ್ಮ

ಅಪೊಸ್ತಲರ ಕೃತ್ಯಗಳಲ್ಲಿ ಕೆಲವು ವಿಷಯಗಳಲ್ಲಿ ಜನರು ನಂಬಿದರು ಮತ್ತು

ಬಾಪ್ತಿಸ್ಮ ಹೊಂದಿದರು ಎಂದು ವರದಿ ಮಾಡಲ್ಪಟ್ಟಿದೆ, ಆದರೆ ಅವರು ಮಾನಸಾಂತರದ ಬಗ್ಗೆ ಇಲ್ಲವೇ ಅರಿಕೆಯ ಬಗ್ಗೆ ಏನೂ ಹೇಳಲ್ಪಟ್ಟಿರುವದಿಲ್ಲ (ಐತಿಯೋಪ್ಯದ ಕಂಚುಕಿಯ ಅರಿಕೆಯು ಅಧಿಕೃತವಾದದ್ದು ಆಗಿರದಿದ್ದರೆ). ನಂಬುವುದು ಬಾಪ್ತಿಸ್ಮದೊಂದಿಗೆ ನಮೂದಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 8:12; 18:8); ಆದರೆ ಮಾನಸಾಂತರ ಪಡುವುದು ಬಾಪ್ತಿಸ್ಮದೊಂದಿಗೆ ಒಂದೇ ಒಂದು ಸಲ ನಮೂದಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 2:38), ಮತ್ತು ಅರಿಕೆಯು ಅದರೊಂದಿಗೆ ನಮೂದಿಸಲ್ಪಟ್ಟಿರುವದಿಲ್ಲ. ಅಪೊಸ್ತಲರ ಕೃತ್ಯಗಳ ಗ್ರಂಥವು ಜನರು ಅರಿಕೆ ಮಾಡಲು ಹೇಳಲ್ಪಟ್ಟದ್ದರ ಯಾವುದೇ ಹೇಳಿಕೆ ಕೊಡುವದಿಲ್ಲ. ನಿಶ್ಚಯವಾಗಿಯೂ, ನಂಬುವುದು ಮಾತ್ರವೇ ಇಲ್ಲವೇ ಬಾಪ್ತಿಸ್ಮ ಮಾತ್ರವೇ ಹೇಳಲ್ಪಟ್ಟಾಗ ಮಾನಸಾಂತರ ಮತ್ತು ಅರಿಕೆಗಳು ಅನ್ವಯಿಸಲ್ಪಟ್ಟಿವೆ. "ನಂಬು" ಎಂಬ ಪದವು ಕಾಣಿಸಿಕೊಳ್ಳುವಾಗ ಬಾಪ್ತಿಸ್ಮ ಸಹ ಅನ್ವಯಿಸಲ್ಪಟ್ಟಿದೆ ಇಲ್ಲವೇ ಬಾಪ್ತಿಸ್ಮ ಮಾತ್ರವೇ ನಮೂದಿಸಲ್ಪಟ್ಟಾಗ ನಂಬುವುದು ಅನ್ವಯಿಸಲ್ಪಟ್ಟಿದೆ ಎಂದು ಇದು ತೋರಿಸುತ್ತದೆ.

ಮಾನಸಾಂತರ ಮತ್ತು ಅರಿಕೆ ಇಲ್ಲದೇ ಒಬ್ಬ ವ್ಯಕ್ತಿಯು ರಕ್ಷಿಸಲ್ಪಡದಿದ್ದರೆ, ಯೇಸುವಿನ ಬಗೆಗಿನ ಪ್ರಸಂಗಿಸುವಿಕೆಗೆ ಪ್ರತೀ ಸಲ ಉತ್ತರ ಕೊಡುವಾಗ ಬಾಪ್ತಿಸ್ಮದ ಬದಲು ಈ ಕಾರ್ಯಗಳು ಯಾಕೆ ಹೇಳಲ್ಪಟ್ಟಿರುವದಿಲ್ಲ? ರಕ್ಷಣೆಗೆ ಬಾಪ್ತಿಸ್ಮದ ಅವಶ್ಯಕತೆಯಿರದಿದ್ದರೆ, ಅದು ಅಷ್ಟು ಸಲ ಯಾಕೆ ನಮೂದಿಸಲ್ಪಟ್ಟಿದೆ, ಮಾನಸಾಂತರ ಮತ್ತು ಅರಿಕೆಗಳು (ರಕ್ಷಣೆಗಾಗಿ ಇವು ಅಗತ್ಯವೆಂದು ಹೆಚ್ಚಾದ ಧಾರ್ಮಿಕ ಗುಂಪುಗಳು ಯೋಚಿಸುವಾಗ) ಯಾಕೆ ನಮೂದಿಸಲ್ಪಟ್ಟಿರುವದಿಲ್ಲ?

ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಈ ಕೆಳಗಿನ ಹೋಲಿಕೆಗಳನ್ನು ಮಾಡಬಹುದು.

ಎ. ಕ್ರೈಸ್ತರಲ್ಲದವರು ಈ ಕೆಳಗಿನದನ್ನು ಮಾಡಲು ಎಷ್ಟು ಸಲ ಹೇಳಲ್ಪಟ್ಟರು:

1. ನಂಬು - ಮೂರ ಸಲ (ಅಪೊಸ್ತಲರ ಕೃತ್ಯಗಳು 8:37; 10:43; 16:31).
2. ಮಾನಸಾಂತರ ಪಡು - ಮೂರು ಸಲ (ಅಪೊಸ್ತಲರ ಕೃತ್ಯಗಳು 3:19; 17:30; 26:20).
   ಮಾನಸಾಂತರ ಪಡು ಮತ್ತು ನಂಬು - ಶೂನ್ಯ.
   ಮಾನಸಾಂತರ ಪಡು ಮತ್ತು ಬಾಪ್ತಿಸ್ಮ ಮಾಡಿಸಿಕೋ - ಒಂದು ಸಲ (ಅಪೊಸ್ತಲರ ಕೃತ್ಯಗಳು 2:38).
3. ಬಾಪ್ತಿಸ್ಮ ಮಾಡಿಸಿಕೋ - ಮೂರು ಸಲ (ಅಪೊಸ್ತಲರ ಕೃತ್ಯಗಳು 2:38; 10:48; 22:16).
   ಬಾಪ್ತಿಸ್ಮ ಮಾಡಿಸಿಕೋ ಮತ್ತು ಮಾನಸಾಂತರ ಪಡು - ಒಂದು ಸಲ (ಅಪೊಸ್ತಲರ ಕೃತ್ಯಗಳು 2:38).
   ಬಾಪ್ತಿಸ್ಮ ಮಾಡಿಸಿಕೋ ಮತ್ತು ಅರಿಕೆ ಮಾಡು - ಶೂನ್ಯ.
4. ಅರಿಕೆ ಮಾಡು - ಶೂನ್ಯ.

ಬಿ. ಲೂಕನಿಂದ ವರದಿ ಮಾಡಿದ ಈ ತಕ್ಷಣದ ಉತ್ತರಗಳು ಎಷ್ಟು ಸಲ:

1. ನಂಬಿದರು - ಹನ್ನೆರಡು ಸಲ (ಅಪೊಸ್ತಲರ ಕೃತ್ಯಗಳು 4:4; 8:12, 13; 9:42; 11:17, 21; 13:12; 13:48; 14:1; 17:12, 34; 18:8).
2. ಬಾಪ್ತಿಸ್ಮ ಮಾಡಿಸಿಕೊಂಡರು - ಒಂಭತ್ತು ಸಲ (ಅಪೊಸ್ತಲರ

ಕೃತ್ಯಗಳು 2:41; 8:12, 13, 38; 9:18; 16:15, 33; 18:8; 19:5).

3. ಮಾನಸಾಂತರ ಪಟ್ಟರು - ಶೂನ್ಯ.
4. ಅರಿಕೆ ಮಾಡಿದರು - ಒಂದು ಸಲ (ಅಪೊಸ್ತಲರ ಕೃತ್ಯಗಳು 8:37 ಅಧಿಕೃತವಾಗಿದ್ದರೆ; ಇಲ್ಲದಿದ್ದರೆ - ಶೂನ್ಯ.
5. ನಂಬಿದರು ಮತ್ತು ಬಾಪ್ತಿಸ್ಮ ಮಾಡಿಸಿಕೊಂಡರು - ಮೂರು ಸಲ (ಅಪೊಸ್ತಲರ ಕೃತ್ಯಗಳು 8:12, 13; 18:8).
6. ಮಾನಸಾಂತರ ಪಟ್ಟರು ಮತ್ತು ಬಾಪ್ತಿಸ್ಮ ಮಾಡಿಸಿಕೊಂಡರು - ಶೂನ್ಯ.
7. ಮಾನಸಾಂತರ ಪಟ್ಟರು ಅರಿಕೆ ಮಾಡಿದರು - ಶೂನ್ಯ.

ಸಿ. ಸುವಾರ್ತೆಗೆ ವಿಧೇಯರಾದ ಜನರಿಂದ ಈ ಪ್ರತಿಕ್ರಿಯೆಗಳನ್ನು ಲೂಕನು ಎಷ್ಟು ಸಲ ವರದಿ ಮಾಡಿದನು:

1. ನಂಬಿದರು - ಹದಿಮೂರು ಸಲ (ಅಪೊಸ್ತಲರ ಕೃತ್ಯಗಳು 2:44; 4:32; 11:17; 14:23; 15:5; 16:1, 34; 18:27; 19:2, 18; 21:20, 25; 22:19).
2. ಬಾಪ್ತಿಸ್ಮ ಮಾಡಿಸಿಕೊಂಡರು - ಒಂದು ಸಲ (ಅಪೊಸ್ತಲರ ಕೃತ್ಯಗಳು 8:16).
3. ಮಾನಸಂತರ ಪಟ್ಟರು - ಶೂನ್ಯ.
4. ಅರಿಕೆ ಮಾಡಿದರು - ಶೂನ್ಯ.

ಈ ಹೋಲಿಕೆಗಳಿಂದ, ನಂಬುವುದು ಮತ್ತು ಬಾಪ್ತಿಸ್ಮ ಮಾಡಿಸಿಕೊಳ್ಳುವುದು ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಮಾನಸಾಂತರಪಡುವುದು ಮತ್ತು ಅರಿಕೆ ಮಾಡುವುದಕ್ಕಿಂತ ಹೆಚ್ಚು ಸಲ ನಮೂದಿಸಲ್ಪಟ್ಟಿರುವುದು ಕಂಡು ಬರುತ್ತದೆ. ಕ್ರೈಸ್ತರಾದವರ ಬಗ್ಗೆ ಹೇಳುವದರಲ್ಲಿ, ಅಪೊಸ್ತಲರ ಕೃತ್ಯಗಳ ಪುಸ್ತಕವು ಸಾಮನ್ಯವಾಗಿ ಅವರು ನಂಬಿದರು ಮತ್ತು/ಇಲ್ಲವೇ ಬಾಪ್ತಿಸ್ಮ ಹೊಂದಿದರು ಎಂದು ಹೇಳುತ್ತದೆ; ಆದರೆ ಅವರು ಮಾನಸಾಂತರ ಇಲ್ಲವೇ ಅರಿಕೆ ಮಾಡಿದರು ಎಂಬುದನ್ನು ಯಾವದೇ ವಾಕ್ಯಭಾಗ ಹೇಳುವದಿಲ್ಲ.

## ಪೌಲನ ಪತ್ರಿಕೆಗಳಲ್ಲಿ ಬಾಪ್ತಿಸ್ಮ

ಪೌಲನು ಸಭೆಗಳಿಗೆ ಬರೆದ ತನ್ನ ಹೆಚ್ಚಾದ ಪುಸ್ತಕಗಳಲ್ಲಿ ಹೊಸ ಒಡಂಬಡಿಕೆಯ ಬಾಪ್ತಿಸ್ಮವನ್ನು ನಮೂದಿಸಿದನು (ರೋಮಾಪುರ 6:3, 4; 1 ಕೊರಿಂಥ 1:13-17; 12:13; ಗಲಾತ್ಯ 3:27; ಎಫೆಸ 4:5; ಕೊಲೊಸ್ಸೆ 2:12). ಬಾಪ್ತಿಸ್ಮದ ಸ್ವಾಭಾವಿಕವಾದ ಪರಿಣಾಮದಂತೆ ಯೇಸುವಿಗೆ ತಮ್ಮ ಸಮರ್ಪಣೆಯಲ್ಲಿ ಮುಂದುವರಿಯ ಬೇಕೆಂದು ಅವನು ಸದಸ್ಯರನ್ನು ಪ್ರೋತ್ಸಾಹಿಸಿದನು. ಪೌಲನು ಬಾಪ್ತಿಸ್ಮವನ್ನು ನೂತನ ಜೀವನದ ಪ್ರಾರಂಭದೊಂದಿಗೆ (ರೋಮಾಪುರ 6:4; ಕೊಲೊಸ್ಸೆ 2:12, 13), ಅಪರಾಧಗಳ ಕ್ಷಮಾಪಣೆಯೊಂದಿಗೆ (ಕೊಲೊಸ್ಸೆ 2:13), ಯೇಸುವನ್ನು ಧರಿಸಿಕೊಳ್ಳುವದರೊಂದಿಗೆ (ಗಲಾತ್ಯ 3:27) ಮತ್ತು ವಿಶ್ವಾಸಿಗಳ ಐಕ್ಯತೆಯೊಂದಿಗೆ (1 ಕೊರಿಂಥ 12:13; ಗಲಾತ್ಯ 3:27, 28; ಎಫೆಸ 4:1-6) ಸಂಬಂಧಿಸಿದನು. ಪೌಲನು ಬಾಪ್ತಿಸ್ಮವನ್ನು ನಮೂದಿಸಿದನು ಆದರೆ ನಂಬಿಕೆ, ಮಾನಸಾಂತರ, ಇಲ್ಲವೇ ಇವುಗಳೊಂದಿಗೆ

ಸಂಬಂಧದಲ್ಲಿ ಅರಿಕೆಯ ಬಗ್ಗೆ ಏನನ್ನೂ ಹೇಳಲಿಲ್ಲ. ಅವನು ಇತರ ವಾಕ್ಯಭಾಗಗಳಲ್ಲಿ ಬಾಪ್ತಿಸ್ಮವನ್ನು ಸಂಬಂಧಿಸಿರ ಬಹುದು (ಎಫೆಸ 5:26; ತೀತ 3:5).

## ಪೇತ್ರನ ಬರಹಗಳಲ್ಲಿ ಬಾಪ್ತಿಸ್ಮ

ಪೇತ್ರನು ನಂಬಿಕೆಯನ್ನು ನಾಲ್ಕು ಸಲ (1 ಪೇತ್ರ 1:8, 21; 2:6, 7) ಮತ್ತು ವಿಶ್ವಾಸವನ್ನು ಏಳುಸಲ (1 ಪೇತ್ರ 1:5, 7, 9, 21; 5:9; 2 ಪೇತ್ರ 1:1, 5) ನಮೂದಿಸಿದನು, ಆದರೆ ರಕ್ಷಣೆಯೊಂದಿಗೆ ಸಂಬಂಧಿಸಿ ಒಂದೇ ಸಲ ಉಪಯೋಗಿಸಿದನು (1 ಪೇತ್ರ 1:9). ಮಾನಸಾಂತರದ ಬಗ್ಗೆ ಒಂದು ಸಲ ಅವನು ಮಾತಾಡಿದನು (2 ಪೇತ್ರ 3:9), ಅದನ್ನು ದೇವರು ಎಲ್ಲಾ ಜನರಿಂದ ಅಪೇಕ್ಷಿಸುವವನು ಎಂದು ಅವನು ಹೇಳಿದನು. ಅರಿಕೆಯನ್ನು ಅವನು ಎಂದೂ ನಮೂದಿಸಲಿಲ್ಲ.

ಅವನು ನೋಹನ ಮತ್ತು ಅವನ ಕುಟುಂಬದ ವಿಮೋಚನೆಯನ್ನು ನಮ್ಮ ರಕ್ಷಣೆಯೊಂದಿಗೆ ಹೋಲಿಸಿದನು:

> ... ಪೂರ್ವಕಾಲದಲ್ಲಿ ನೋಹನು ನಾವೆಯನ್ನು ಕಟ್ಟಿಸುತ್ತಿರಲು ದೇವರು ದೀರ್ಘಶಾಂತಿಯಿಂದ ಕಾದಿದ್ದಾಗ ಆತನಿಗೆ ಅವಿಧೇಯರಾಗಿದ್ದವರ ಬಳಿಗೆ ಹೋಗಿ ಸುವಾರ್ತೆಯನ್ನು ಸಾರಿದನು. ಆ ನಾವೆಯೊಳಗೆ ಕೆಲವರು ಅಂದರೆ ಎಂಟೇ ಜನರು ಸೇರಿ ನೀರಿನ ಮೂಲಕ ರಕ್ಷಣೆ ಹೊಂದಿದರು. ಆ ನೀರಿಗೆ ಅನುರೂಪವಾದ ಬಾಪ್ತಿಸ್ಮವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ ಅದು ಮೈಕೊಳೆಯನ್ನು ಹೋಗಲಾಡಿಸುವಂಥದ್ದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ (1 ಪೇತ್ರ 3:20, 21).

## ಸಾರಾಂಶ

ಬಾಪ್ತಿಸ್ಮವು ಮೊದಲು ಯೋಹಾನನಿಂದ, ಆ ಮೇಲೆ ಯೇಸುವಿನಿಂದ, ಆ ಮೇಲೆ ಅಪೊಸ್ತಲರಿಂದ ಮತ್ತು ಆದಿ ಸಭೆಯಿಂದ ಬೋಧಿಸಲ್ಪಟ್ಟಿತ್ತು. ಶಿಲುಬೆಯ ಮೇಲೆ ಯೇಸುವಿನ ಮರಣದನಂತರ, ಬಾಪ್ತಿಸ್ಮವು ಸುವಾರ್ತೆಯು ಬೋಧಿಸಲ್ಪಟ್ಟವರಿಗೆ, ಯೇಸುವಿನಲ್ಲಿ ನಂಬಿಕೆಯಿಟ್ಟವರಿಗೆ, ತಮ್ಮ ಪಾಪಗಳಿಗಾಗಿ ಮಾನಸಾಂತರ ಪಟ್ಟವರಿಗಾಗಿ, ದೇವರೊಂದಿಗೆ ನೂತನ ಸಂಬಂಧವನ್ನು ಮತ್ತು ನೂತನ ಜೀವಿತವನ್ನು ಹುಡುಕುತ್ತಿದ್ದವರಿಗೆ ಕೊಡಲ್ಪಟ್ಟಿತು. ಬಾಪ್ತಿಸ್ಮವು ಯೇಸುವಿನ ರಕ್ತದ ಮುಖಾಂತರ ದೇವರೊಂದಿಗಿನ ತಪ್ಪಾದ ಸಂಬಂಧವು ಸರಿಮಾಡಲ್ಪಟ್ಟ ಮತ್ತು ನೂತನ ಜೀವವು ಪ್ರಾರಂಭವಾದ ಅಂಶವೆಂದು ಯೋಚಿಸಲ್ಪಟ್ಟಿತು.

---

## ರಕ್ಷಣೆಯ ಬಗ್ಗೆ ದೇವರ ಯೋಜನೆಯಲ್ಲಿ ನೀರು

ನೀರು ಜೀವಕ್ಕೆ ಮಹತ್ವದ್ದಾಗಿದೆ. ಭೂಮಿಯ ಮೇಲೆ ನಾವು ತಿಳಿಯುವಂಥ ಜೀವವು ನೀರು ಇಲ್ಲದೇ ಅಸ್ತಿತ್ವದಲ್ಲಿ ಇರಲಾರದೆಂದು ವಿಜ್ಞಾನಿಗಳು ನಂಬುತ್ತಾರೆ. ದೇವರು ತನ್ನ ಉದ್ದೇಶಗಳನ್ನು ಪೂರೈಸುವದರಲ್ಲಿ ನೀರನ್ನು ಅನೇಕ ಸಂಗತಿಗಳಲ್ಲಿ ಉಪಯೋಗಿಸಿದ್ದಾನೆ. ಆದಿಯಲ್ಲಿ, ದೇವರು ಪ್ರತಿಯೊಂದನ್ನು ಸೃಷ್ಟಿಸಿದಾಗ, "ಭೂಮಿಯು ನೀರಿನೊಳಗಿನಿಂದಲೂ ನೀರಿನಿಂದಲೂ ರೂಪಿಸಲ್ಪಟ್ಟಿತು" (2 ಪೇತ್ರ 3:5). ಭೂಮಿಯು ನೀರಿನೊಳಗಿನಿಂದ ರೂಪಿಸಲ್ಪಟ್ಟನಂತರ ಜೀವವು ಅದರ ಮೇಲೆ ಸಾಧ್ಯವಾಗಿ

ಮಾಡಲ್ಪಟ್ಟಿತು. ನೀರು ಆಧಾರವಾಗಿತ್ತು (ಆದಿಕಾಂಡ 2:6) ಮತ್ತು ಭೂಮಿಯ ಮೇಲೆ ಭೌತಿಕ ಜೀವದ ಎಲ್ಲಾ ರೂಪಗಳಿಗೆ ಆಧಾರವಾಗಿರುವದನ್ನು ಮುಂದುವರಿಸುತ್ತದೆ.

ನೋಹನು ನೀರಿನ ಮುಖಾಂತರ ಸುರಕ್ಷಿತತೆಗೆ ತರಲ್ಪಟ್ಟನು (1 ಪೇತ್ರ 3:20). ನೋಹನು ನಾವೆಯನ್ನು ಕಟ್ಟಿದನಂತರ. ನೋಹನನ್ನೂ ಅವನ ಕುಟುಂಬವನ್ನೂ ಸುರಕ್ಷಿತತೆಗೆ ತರಲು ಮತ್ತು ಅವರನ್ನು ನಾಶನದಿಂದ ಬಿಡುಗಡೆ ಮಾಡಲು ನೀರು ಅವಶ್ಯವಾಗಿತ್ತು. ಅದರ ಬದಲು ದೇವರು ಬೆಂಕಿಯನ್ನು ಕಳುಹಿಸಿದ್ದರೆ, ಅವರು ಸುಟ್ಟುಹೋಗುತ್ತಿದ್ದರು. ದೇವರು ಜಲಪ್ರಳಯವನ್ನು ಕಳುಹಿಸಿದಾಗ ನಾವೆಯಲ್ಲಿ ಮಾನವ ಜೀವವನ್ನು ಕಾಪಾಡುವದಕ್ಕಾಗಿ ನೀರು ಅವಶ್ಯವಾಗಿತ್ತು.

ಇಸ್ರಾಯೇಲ್ಯರು ಐಗುಪ್ತ ಸೇನೆಯಿಂದ ತಪ್ಪಿಸಿಕೊಂಡಾಗ ನೀರನ್ನು ದಾಟಿ ಸುರಕ್ಷಿತತೆಗೆ ಹೋದರು. ಫರೋಹನ ಸೈನ್ಯವು ನೀರಿನಿಂದ ನಾಶಪಡಿಸಲ್ಪಟ್ಟಿತು (ವಿಮೋಚನಕಾಂಡ 14:26-29). “ಆ ದಿನದಲ್ಲಿ ಯೆಹೋವನು ಇಸ್ರಾಯೇಲ್ಯರನ್ನು ಐಗುಪ್ತ್ಯರ ಕೈಗೆ ತಪ್ಪಿಸಿದನು” ಎಂದು ವಿಮೋಚನಕಾಂಡ 14:30ಎರಲ್ಲಿ ನಾವು ಓದುತ್ತೇವೆ. ಅನಂತರದಲ್ಲಿ ಪೌಲನು, “ಅವರೆಲ್ಲರೂ ಮೋಶೆಯ ಶಿಷ್ಯರಾಗುವದಕ್ಕಾಗಿ ಮೇಘದಲ್ಲಿಯೂ ಸಮುದ್ರದಲ್ಲಿಯೂ ಬಾಪ್ತಿಸ್ಮವನ್ನು ಹೊಂದಿದರು” (1 ಕೊರಿಂಥ 10:2) ಎಂದು ಬರೆದನು. ಈ ವಚನದಿಂದ ಬಾಪ್ತಿಸ್ಮವು ಚಿಮುಕಿಸುವಿಕೆಯಾಗಿದೆ ಎಂದು ಕೆಲವರು ವಾದಿಸಿದರು. ಇಸ್ರಾಯೇಲ್ಯರು ಸಮುದ್ರವನ್ನು ದಾಟಿಹೋಗುತ್ತಿದ್ದಂತೆ ಮೋಡವು ನೀರನ್ನು ಚಿಮುಕಿಸಿತು ಎಂದು ಅವರು ತಿಳಿದುಕೊಳ್ಳುತ್ತಾರೆ. ಇದು ಸತ್ಯ ವಾಗಿದ್ದರೆ, ಆಗ ಇಸ್ರಾಯೇಲ್ಯರು “ಒಣನೆಲದ ಮೇಲೆ” ದಾಟಿ ಹೋಗಲಿಲ್ಲ (ವಿಮೋಚ ನಕಾಂಡ 14:22). ಸತ್ಯದಲ್ಲಿ, ಇಸ್ರಾಯೇಲ್ಯರಿಗೆ ಒದಗಿಸಲ್ಪಟ್ಟ ಮೋಡವು ನೀರಿನ ಮೋಡವಾಗಿರಲಿಲ್ಲ ಆದರೆ ಹೊಗೆಯು ಮೋಡವಾಗಿತ್ತು. ಅದು “ಹಗಲಲ್ಲಿ ಧೂಮ ಮೇಘವನ್ನು, ಇರುಳಲ್ಲಿ ಪ್ರಜ್ವಲಿಸುವ ಅಗ್ನಿಯ ಪ್ರಕಾಶವನ್ನು, ಉಂಟು ಮಾಡುವದಾಗಿತ್ತು” (ಯೆಶಾಯ 4:5).

ಅನಂತರದಲ್ಲಿ, ಇಸ್ರಾಯೇಲು ವಾಗ್ದತ್ತ ದೇಶವನ್ನು ಪ್ರವೇಶಿಸುವದಕ್ಕಾಗಿ ನೀರಿನ ಮುಖಾಂತರ ದಾಟಿ ಹೋಯಿತು (ಯೆಹೋಶುವ 3:14-17). ನೀರಿನ ಮುಖಾಂತರ ದಾಟಿ ಹೋಗುವದರಿಂದ, ಜನರು ತಮಗೆ ದೇವರು ವಾಗ್ದಾನ ಮಾಡಿದ ಆಶೀರ್ವಾದಗಳಿಗೆ ಬಂದರು.

ನೀರು ನಾಮಾನನಿಗೂ ಮತ್ತು ಅವನು ಕುಷ್ಠರೋಗದಿಂದ ಶುದ್ಧೀಕರಿ ಸಲ್ಪಡುವದಕ್ಕೂ ಮಧ್ಯದಲ್ಲಿ ನಿಂತಿತು (2 ಅರಸುಗಳು 5:1-14). ಯೇಸುವಿನ ಬಳಿಗೆ ಬಂದ ಕುರುಡನನ್ನು ಗುಣಪಡಿಸುವಲ್ಲಿ ನೀರು ಉಪಯೋಗಿಸಲ್ಪಟ್ಟಿತು (ಯೋಹಾನ 9:6, 7).

ಪಾರಲೌಕಿಕ ಜೀವದ ಪೋಷಣ ಶಕ್ತಿಯು ದೇವರ ಸಿಂಹಾಸನದಿಂದ ಹರಿಯುವ ನೀರಿನ ನದಿಯಿಂದ ಸಾಂಕೇತಿಸಲ್ಪಟ್ಟಿದೆ (ಪ್ರಕಟನೆ 22:1). ಜೀವವನ್ನೂ ಒಳಗೊಂಡು, ದೇವರ ಅನೇಕ ಆಶೀರ್ವಾದಗಳು ನೀರಿನ ಮುಖಾಂತರ ಬರುತ್ತವೆ. ಯೇಸುವಿನ ಮುಖಾಂತರ ರಕ್ಷಣೆಯನ್ನು ಹುಡುಕುವವರಿಗಾಗಿ ನೀರನ್ನು ದೇವರು ಅಗತ್ಯವಾ ದದ್ದನ್ನಾಗಿ ಆಯ್ದುಕೊಂಡದ್ದು ಸಹ ಘಟನೆಯಾಗಿರುವದಿಲ್ಲ (1 ಪೇತ್ರ 3:21). ಹೋಲಿ ಕೆಯ ಅರ್ಥದಲ್ಲಿ ಜೀವವು ರಕ್ತದ ಮೇಲೆ ಅವಲಂಭಿಸಿರುತ್ತದೆ (ಆದಿಕಾಂಡ 9:4) ಮತ್ತು ಆತ್ಮಿಕ ಜೀವವು ಯೇಸುವಿನ ರಕ್ತದ ಮೇಲೆ ಅವಲಂಭಿಸಿರುತ್ತದೆ (ಇಬ್ರಿಯ 9:22), ಹಾಗೆಯೇ ನೀರು ದೈಹಿಕ ಜೀವಕ್ಕೂ ಮತ್ತು ಕ್ರಿಸ್ತನ ನೂತನ ಆತ್ಮಿಕ ಜೀವಕ್ಕೂ ಸಹ ಅಗತ್ಯವಾಗಿರುತ್ತದೆ (ರೋಮಾಪುರ 6:4).



© 2009 Truth for Today